# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101

**OFFICE OF THE DEPUTY COMMISSIONER, BALLARI DISTRICT, BALLARI-583101**

Telephone : 08392-277100. Fax : 08392-272538 Email: dcbellary@gmail.com


**ಸಂ:ಕಂ:ಸಿಬ್ಬಂದಿ-2/ 100 /2017-18** **ದಿನಾಂಕ : 16.08.2018**

## :ತಿದ್ದುಪಡಿ ಅಧಿಸೂಚನೆ:

ಈ ಕಾರ್ಯಾಲಯದ ಸಮಸಂಖ್ಯೆ ಅಧಿಸೂಚನೆ ದಿನಾಂಕ: 24.03.2018ರ ಮೂಲಕ ಬಳ್ಳಾರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ 38 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಮೆರಿಟ್ ಆಧಾರದ ಮೇಲೆ ಭರ್ತಿಮಾಡಲು ಆನ್‌ಲೈನ್ ಮೂಲಕ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಭಾರತ ಚುನಾವಣಾ ಆಯೋಗ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಘೋಷಣೆ ಮಾಡಿದ ಹಿನ್ನಲೆಯಲ್ಲಿ ದಿ:27-03-2018 ರಿಂದ ನೀತಿ ಸಂಹಿತ ಜಾರಿಯಲ್ಲಿದ್ದ ಕಾರಣ ಈ ಕಾರ್ಯಾಲಯದ ಪತ್ರ ಸಂಖ್ಯೆ.ಕಂ.ಸಿಬ್ಬಂದಿ-2/100/2017-18 ದಿ:27-03-2018 ರಲ್ಲಿ ಬಳ್ಳಾರಿ ಜಿಲ್ಲೆಯ ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಬೇಕೆ ಅಥವಾ ಸ್ಥಗಿತಗೊಳಿಸಬೇಕೆ ಎಂಬುವುದರ ಬಗ್ಗೆ ಮುಖ್ಯ ಚುನಾವಣಾಧಿಕಾರಿಗಳು ಬೆಂಗಳೂರು ಇವರಿಗೆ ಸ್ಪಷ್ಟೀಕರಣ ಕೋರಲಾಗಿತ್ತು. ಆದರೆ ಸದರಿಯವರಿಂದ ತಕ್ಷಣವೇ ಯಾವುದೇ ಸ್ಪಷ್ಟೀಕರಣ ಬಾರದೇ ಇದ್ದುದ್ದರಿಂದ ಹಾಗೂ ಚುನಾವಣೆ ನೀತಿ ಸಂಹಿತೆಯು ಜಾರಿಯಲ್ಲಿರುವ ಪ್ರಯುಕ್ತ ಈಗಾಗಲೇ ಕರೆಯಲಾದ ಗ್ರಾಮಲೆಕ್ಕಿಗರ ಅಧಿಸೂಚನೆಯನ್ನು ತಕ್ಷಣದಿಂದ ಸ್ಥಗಿತಗೊಳಿಸಲಾಗಿತ್ತು. ಕಾರಣ ಚುನಾವಣೆ ನೀತಿ ಸಂಹಿತ ಮುಗಿದಿರುವುದರಿಂದ ಬಳ್ಳಾರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ 38 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಯನ್ನು ಮುಂದುವರೆಸಲು ನಿರ್ಧರಿಸಿ ಪರಿಷ್ಕೃತ ದಿನಾಂಕಗಳನ್ನು ನಿಗದಿಪಡಿಸಿ ತಿದ್ದುಪಡಿ ಅಧಿಸೂಚನೆಯನ್ನು ದಿ:-09-07-2018 ರಂದು ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಆನ್‌ಲೈನ್ ವೆಬ್‌ಸೈಟ್ http:/ballari-va.kar.nic.in ನಲ್ಲಿ ಅರ್ಜಿಗಳನ್ನು ಸಲ್ಲಿಸಲು ದಿನಾಂಕ:16-08-2018ರಂದು ಕೊನೆಯ ದಿನಾಂಕವಾಗಿರುತ್ತದೆ.

ಆದರೆ, ಕೆಲವು ದಿನಗಳಿಂದ ವೆಬ್‌ಸೈಟ್‌ನಲ್ಲಿ ಪ್ರತಿದಿನ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಿದ್ದು, ಬ್ಯಾಂಕ್‌ನಲ್ಲಿ ಪ್ರತಿದಿನ ರೂ.25,000/- (ಇಪ್ಪತ್ತೈದು ಸಾವಿರ ರೂಪಾಯಿ) ವ್ಯವಹಾರ ಮಿತಿ ಮೀರುತ್ತಿರುವುದರಿಂದ ಈ ಎಲ್ಲಾ ಅರ್ಜಿದಾರರಿಗೂ ಬ್ಯಾಂಕಿನಲ್ಲಿ ಶುಲ್ಕ ಪಾವತಿಸಲು ಆಗುತ್ತಿಲ್ಲ. ಬ್ಯಾಂಕಿನ ನಿಬಂಧ ಪ್ರಕಾರ ಪ್ರತಿನಿತ್ಯ ಕೇವಲ ರೂ.25000/- ರವರೆಗೆ ಮಾತ್ರ ಶುಲ್ಕ ಪಾವತಿಸಿಕೊಳ್ಳಲು ಅವಕಾಶವಿರುತ್ತದೆ. **ಈ ಹಿನ್ನಲೆಯಲ್ಲಿ ಉಳಿದ ಅರ್ಜಿದಾರರಿಗೆ ಅಂದರೆ ದಿನಾಂಕ: 16-08-2018 ರವರೆಗಿನ ಕೊನೆಯ ದಿನಾಂಕದವರೆಗೆ ಅರ್ಜಿಸಲ್ಲಿಸಿದ ಅರ್ಜಿದಾರರಿಗೆ ಮಾತ್ರ ಬ್ಯಾಂಕಿನಲ್ಲಿ ಚಲನ್ ಪಾವತಿಸಲು ಹಾಗೂ ಚಲನ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಮಾತ್ರ ಸಮಯಾವಕಾಶ ನೀಡಲು ತೀರ್ಮಾನಿಸಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಅಧಿಸೂಚನೆ ಹೊರಡಿಸಿದೆ.**

## (CALENDAR OF EVENTS)

| ಕ್ರ.ಸಂ | ವಿವರಗಳು | ದಿನಾಂಕ 09.07.2018ರಂದು ಅಧಿಸೂಚನೆಯಲ್ಲಿ ನಿಗದಿಪಡಿಸಿದ ವೇಳಾಪಟ್ಟಿ | ಪರಿಷ್ಕೃತ ವೇಳಾಪಟ್ಟಿ |
|---|---|---|---|
| 1 | ಅಧಿಸೂಚನೆ ಹೊರಡಿಸಲು ನಿಗಧಿಪಡಿಸಿದ ದಿನಾಂಕ | 28.03.2018 | 28.03.2018 |
| 2 | ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | 16-07-2018 | 16-07-2018 |
| 3 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 16-08-2018 | 16-08-2018 |
| 4 | **ದಿನಾಂಕ : 16.08.2018ರವರೆಗೆ ಅಜಿಸಲ್ಲಿಸಿದ ಅರ್ಜಿದಾರರಿಗೆ ಮಾತ್ರ ಬ್ಯಾಂಕಿನಲ್ಲಿ ಅರ್ಜಿಶುಲ್ಕ ಪಾವತಿಸಲು ಹಾಗೂ ಚಲನ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು 10 ದಿನಗಳ ಸಮಯಾವಕಾಶ ನೀಡಿ ಈ ಮುಂದಿನ ಪರಿಷ್ಕೃತ ದಿನಾಂಕವನ್ನು ನಿಗಧಿಪಡಿಸಿದೆ.** | - | 30-08-2018 |
| 5 | 1:5ರ ಅನುಪಾತದಲ್ಲಿ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲು ನಿಗಧಿಪಡಿಸಿದ ದಿನಾಂಕ | 27-08-2018 | 10-09-2018 |
| 6 | 1:5ರ ಅನುಪಾತದ ಪಟ್ಟಿಗೆ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ | 10-09-2018 | 24-09-2018 |
| 7 | 1:5ರ ಅನುಪಾತದ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಪರಿಶೀಲನೆಗೆ ಜಿಲ್ಲಾಧಿಕಾರಿಗಳ ಕಛೇರಿಗೆ ಹಾಜರಾಗಲು ನಿಗಧಿಪಡಿಸಿದ ದಿನಾಂಕ | 20-09-2018 ಬೆಳಗ್ಗೆ 10-30 ಗಂಟೆಗೆ | 04-10-2018 ಬೆಳಗ್ಗೆ 10-30 ಗಂಟೆಗೆ |
| 8 | ತಾತ್ಕಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ನಿಗಧಿಪಡಿಸಿದ ದಿನಾಂಕ | 29-09-2018 | 12-10-2018 |
| 9 | ತಾತ್ಕಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ | 15-10-2018 | 26-10-2018 |
| 10 | ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ನಿಗಧಿಪಡಿಸಿ ದಿನಾಂಕ | 22-10-2018 | 02-11-2018 |
| 11 | ಅರ್ಜಿ ಸಲ್ಲಿಸಬೇಕಾದ ವೆಬ್ ಸೈಟ್ | http://ballari-va.kar.nic.in | |
| 12 | ಸ್ಪಷ್ಟೀಕರಣ/ ಮಾಹಿತಿಗಾಗಿ ಸಂಪರ್ಕಿಸಬಹುದಾದ ಹೆಲ್ಪ್ ಲೈನ್ | 08392-271202 | |

**(ಡಾ: ವಿ.ರಾಮ್‌ಪ್ರಸಾತ್ ಮನೋಹರ್)** ಭಾ.ಆ.ಸೇ

ಅಧ್ಯಕ್ಷರು

ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ

ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಬಳ್ಳಾರಿ